## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 133 (155)
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
ಉತ್ತರಿಸಬೇಕಾದ ದಿನಾಂಕ : 14.02.2023
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ದ್ರುವತ್ಯಾಜ್ಯ ವಿಲೇವಾರಿಯನ್ನು ಯಾವ ರೀತಿಯಲ್ಲಿ ಮಾಡಲಾಗುತ್ತಿದೆ; (ಪಾಲಿಕೆವಾರು ವಿವರ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ದ್ರುವ ತ್ಯಾಜ್ಯ ವಿಲೇವಾರಿಯ ನಿರ್ವಹಣೆಗೆ ಸಂಬಂಧಿಸಿದಂತೆ ಪಾಲಿಕೆವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸೀವೇಜ್ ಟ್ರೀಟ್ ಮೆಂಟ್ ಪ್ಲಾಂಟ್‌ಗಳ ಸಂಖ್ಯೆ ಎಷ್ಟು; ಇವುಗಳ ನಿರ್ವಹಣೆಯನ್ನು ಗುತ್ತಿಗೆಗೆ ನೀಡಲಾಗಿದೆಯೇ ಅಥವಾ ಪಾಲಿಕೆಯ ನೌಕರರಿಂದ ನಿರ್ವಹಿಸಲಾಗುತ್ತಿದೆಯೇ; ಗುತ್ತಿಗೆ ನೀಡಿದ್ದಲ್ಲಿ ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ; (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 4 ಸೀವೆಜ್ ಟ್ರೀಟ್ ಮೆಂಟ್ ಪ್ಲಾಂಟ್ ಗಳಿದ್ದು, ಅವುಗಳ ನಿರ್ವಹಣೆಯನ್ನು ಹೊರಗುತ್ತಿಗೆಗೆ ನೀಡಲಾಗಿದೆ. ವಿವರ ಈ ಕೆಳಗಿನಂತಿದೆ.<br>1. ಸುರತ್ಕಲ್ ದ್ರುವ ತ್ಯಾಜ್ಯ ಘಟಕ - ಮೆ\| ಗ್ರೀನ್‌ಎನ್ವೀರೋಟೆಕ್ ಸರ್ವಿಸಸ್, ಬೆಂಗಳೂರು<br>2. ಪಚ್ಚನಾಡಿ ಎಸ್.ಟಿ.ಪಿ - ಮೆ\| ಗ್ರೀನ್‌ಎನ್ವೀರೋಟೆಕ್ ಸರ್ವಿಸಸ್, ಬೆಂಗಳೂರು<br>3. ಕಾವೂರು ದ್ರುವ ತ್ಯಾಜ್ಯ ಘಟಕ - ಎಂ.ಎಸ್.ಇ.ಝುಡ್, ಮಂಗಳೂರು.<br>4. ಬಜಾಲ್ ದ್ರುವ ತ್ಯಾಜ್ಯ ಘಟಕ - ಮೆ\| ಗ್ರೀನ್‌ಎನ್ವೀರೋಟೆಕ್ ಸರ್ವಿಸಸ್, ಬೆಂಗಳೂರು |
| ಇ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಸೀವೇಜ್ ಟ್ರೀಟ್ ಮೆಂಟ್ ಪ್ಲಾಂಟ್‌ಗಳ ನಿರ್ವಹಣೆಗಾಗಿ ಭರಿಸಲಾದ ಮೊತ್ತವೆಷ್ಟು; ವೆಚ್ಚಗಳನ್ನು ಹೇಗೆ ಭರಿಸಲಾಗಿದೆ; (ಏಜೆನ್ಸಿವಾರು ಸಂಪೂರ್ಣ ಮಾಹಿತಿ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೀವೇಜ್ ಟ್ರೀಟ್ ಮೆಂಟ್ ಪ್ಲಾಂಟ್‌ಗಳ ನಿರ್ವಹಣೆಗಾಗಿ ಭರಿಸಲಾದ ಮೊತ್ತದ ವಿವರ ಈ ಕೆಳಗಿನಂತಿದೆ:<br>1. **ಸುರತ್ಕಲ್ ದ್ರುವ ತ್ಯಾಜ್ಯ ಘಟಕ:** ಮೆ\| ಶಾನ್‌ಎಂಟರ್ ಪ್ರೈಸಸ್, ಮಂಗಳೂರು - ರೂ. 98,20,000.00 ಮತ್ತು ಮೆ\| ಗ್ರೀನ್ ಎನ್ವೀರೋಟೆಕ್ ಸರ್ವಿಸಸ್, ಬೆಂಗಳೂರು - ರೂ. 1,21,00,000.00<br>2. **ಪಚ್ಚನಾಡಿ ಎಸ್.ಟಿ.ಪಿ.:** ಮೆ\| ಶಾನ್‌ಎಂಟರ್ ಪ್ರೈಸಸ್, ಮಂಗಳೂರು - ರೂ. 49,56,000.00 ಮತ್ತು ಮೆ\| ಗ್ರೀನ್ ಎನ್ವೀರೋಟೆಕ್ ಸರ್ವಿಸಸ್, ಬೆಂಗಳೂರು - ರೂ. 2,14,09,437.00<br>3. **ಕಾವೂರು ದ್ರುವ ತ್ಯಾಜ್ಯ ಘಟಕ:** ಎಂ.ಎಸ್.ಇ.ಝುಡ್, ಮಂಗಳೂರು - ರೂ. 22,50,38,899.00<br>4. **ಬಜಾಲ್ ದ್ರುವ ತ್ಯಾಜ್ಯ ಘಟಕ:** ಕರ್ನಲ್ ಡಿ.ಸೋಜಾ, ಗುತ್ತಿಗೆದಾರರು, ಮಂಗಳೂರು - ರೂ. 21,12,000.00 ಮತ್ತು ಮೆ\| ಗ್ರೀನ್ ಎನ್ವೀರೋಟೆಕ್ ಸರ್ವಿಸಸ್, ಬೆಂಗಳೂರು - ರೂ. 23,20,000.00<br>ಸದರಿ ವೆಚ್ಚಗಳನ್ನು ಮಹಾನಗರಪಾಲಿಕೆಯ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿಯಲ್ಲಿ ಭರಿಸಲಾಗಿದೆ. |

| | | |
|---|---|---|
| ಈ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸೀವೇಜ್ ಟ್ರೀಟ್ ಮೆಂಟ್ ಪ್ಲಾಂಟ್‌ಗಳಲ್ಲಿ ಇಂಧನ ಚಾಲಿತ ಜನರೇಟರ್ ಗಳನ್ನು ಬಳಸಲಾಗುತ್ತಿದೆಯೇ; ಬಳಸಲಾಗುತ್ತಿದ್ದಲ್ಲಿ ಯಾವ ಸಾಮರ್ಥ್ಯದ ಜನರೇಟರ್ ಗಳನ್ನು ಬಳಸಲಾಗುತ್ತಿದೆ; (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸೀವೇಜ್ ಟ್ರೀಟ್ ಮೆಂಟ್ ಪ್ಲಾಂಟ್‌ಗಳಲ್ಲಿ ಇಂಧನ ಚಾಲಿತ ಜನರೇಟರ್‌ಗಳ ಬಳಕೆಯ ವಿವರಗಳು ಈ ಕೆಳಗಿನಂತಿದೆ:<br>1. ಸುರತ್ಕಲ್ ದ್ರುವ ತ್ಯಾಜ್ಯ ಘಟಕ - ಇಲ್ಲ<br>2. ಪಚ್ಚನಾಡಿ ಎಸ್.ಟಿ.ಪಿ. - ಇದೆ (500 ಕೆ.ವಿ.ಎ)<br>3. ಕಾವೂರು ದ್ರುವ ತ್ಯಾಜ್ಯ ಘಟಕ - ಇಲ್ಲ<br>4. ಬಜಾಲ್ ದ್ರುವ ತ್ಯಾಜ್ಯ ಘಟಕ - ಇಲ್ಲ |
| ಉ) | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ದ್ರುವತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸಲ್ಲಿಸಿರುವ ಸ್ಥಳೀಯ ಸಂಸ್ಥೆಗಳಲ್ಲಿನ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ಕಾರ್ಯನಿರ್ವಹಣಾ ದಕ್ಷತೆ ವರದಿಯನುಸಾರ, ಕೊರತೆಯಿರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ಕಾರ್ಯ ನಿರ್ವಹಣಾ ದಕ್ಷತೆಯನ್ನು ಹೆಚ್ಚಿಸಲು ಹಾಗೂ ಸಮರ್ಪಕವಾಗಿ ನಿರ್ವಹಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಮಿತಿಯ ವರದಿಯನ್ನಾಧರಿಸಿ ಕ್ರಿಯಾಯೋಜನೆ ತಯಾರಿಸಲಾಗಿರುತ್ತದೆ. |

ನಅಇ 17 ಎಂಎಂಸಿ 2023 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು

## ಅನುಬಂಧ-1

### ಮಹಾನಗರಪಾಲಿಕೆಗಳ ದ್ರವತ್ಯಾಜ್ಯ ನಿರ್ವಹಣೆ ವಿವರಗಳು.

- **ಬಳ್ಳಾರಿ** – ಬಳ್ಳಾರಿ ನಗರದ ದ್ರವತ್ಯಾಜ್ಯ ನೀರನ್ನು ಯು.ಜಿ.ಡಿ ಪೈಪ್‌ಲೈನ್ ಮುಖಾಂತರ ಬಳ್ಳಾರಿ ನಗರದ ಅನಂತಪುರ ರಸ್ತೆಯಲ್ಲಿರುವ 30 ಎಂ.ಎಲ್.ಡಿ ತ್ಯಾಜ್ಯನೀರು ಸಂಸ್ಕರಣಾ ಘಟಕ ಹಾಗೂ ಕೌಲ್‌ಬಜಾರ್‌ನಲ್ಲಿರುವ 15 ಎಂ.ಎಲ್.ಡಿ ತ್ಯಾಜ್ಯನೀರು ಸಂಸ್ಕರಣಾ ಘಟಕಗಳಿದ್ದು, ದ್ರವತ್ಯಾಜ್ಯ ನೀರನ್ನು ಸಂಸ್ಕರಣೆಗೊಳಿಸಿ ನಿಯಮಾನುಸಾರ ಕೃಷಿಭೂಮಿ ಬಳಕೆಗಾಗಿ ಹಳ್ಳಕ್ಕೆ ಹರಿಸಲಾಗುತ್ತದೆ. ಅನಂತಪುರ ರಸ್ತೆಯಲ್ಲಿರುವ 30 ಎಂ.ಎಲ್.ಡಿ ತ್ಯಾಜ್ಯನೀರು ಘಟಕದಿಂದ 2 ಎಂ.ಎಲ್.ಡಿ ತ್ಯಾಜ್ಯನೀರನ್ನು ಮೆ॥ ಜಾನಕಿ ಕಾರ್ಪ್ ಲೀ, ಶಿಡಿಗಿನಮೊಳ, ಬಳ್ಳಾರಿ (ತಾ)(ಜಿ) ಇವರು ತಮ್ಮ ಸ್ಪಾಂಜ್ ಘಟಕಕ್ಕೆ ಸರಬರಾಜು ಮಾಡಿಕೊಳ್ಳಲಾಗುತ್ತಿದೆ.
- **ಮೈಸೂರು** – ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಮುಖಾಂತರ ದ್ರವತ್ಯಾಜ್ಯ ವಿಲೇವಾರಿ ಮಾಡಿ ತ್ಯಾಜ್ಯ ನೀರು ಸಂಸ್ಕರಣ ಘಟಕಗಳಲ್ಲಿ ಶುದ್ಧಿಕರಿಸಿ ನಿರ್ವಹಿಸಲಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 2800 ಕಿಮೀ ನಷ್ಟು ಉದ್ದದ ಒಳಚರಂಡಿ ಕೊಳವೆಮಾರ್ಗ, 65000 ಯಂತ್ರಗುಂಡಿಗಳಿದ್ದು, ಒಟ್ಟು 180.65 ಎಂ.ಎಲ್.ಡಿ ಸಾಮರ್ಥ್ಯದ 4 ಸಂಖ್ಯೆ ತ್ಯಾಜ್ಯ ನೀರು ಸಂಸ್ಕರಣ ಘಟಕಗಳು ಇವೆ.
- **ಕಲಬುರಗಿ** – ಮಹಾನಗರ ಪಾಲಿಕೆಯ ವ್ಯಾಪ್ತಿಯಲಿ ಉತ್ಪತ್ತಿಯಾಗುವ ದ್ರವತ್ಯಾಜ್ಯವನ್ನು ಒಳಚರಂಡಿ ಸಂಪರ್ಕಗಳ ಮೂಲಕ 85 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಎಸ್‌ಬಿಆರ್ ತಂತ್ರಜ್ಞಾನ ಬಳಸಿ ತ್ಯಾಜ್ಯ ನೀರು ಸಂಸ್ಕರಣ ಮಾಡಲಾಗುತ್ತಿದೆ.
- **ತುಮಕೂರು** – ಮೊದಲನೇ ಹಂತದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಿರ್ವಹಿಸಲಾದ ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು 2000ರಲ್ಲಿ ತುಮಕೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದ್ದು, ಪಾಲಿಕೆಯಿಂದ ನಿರ್ವಹಣೆ ಮಾಡಲಾಗುತ್ತಿರುತ್ತದೆ. 2ನೇ ಹಂತದ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು ಪಾಲಿಕೆಗೆ ಹಸ್ತಾಂತರವಾಗಿರುವುದಿಲ್ಲ. ಒಳಚರಂಡಿ ಜಾಲದ ಮುಖಾಂತರ ತ್ಯಾಜ್ಯ ನೀರು ವೀರಸಾಗರ ಮತ್ತು ಗಂಗಸಂದ್ರದ ವೆಟ್‌ವೆಲ್‌ಗಳಲ್ಲೂ ಪ್ರಾಥಮಿಕ ಶುದ್ದೀಕರಣಗೊಂಡು, ಭೀಮಸಂದ್ರದಲ್ಲಿನ ಎಸ್‌ಟಿಪಿಗೆ ಪಂಪ್ ಮಾಡಲಾಗುತ್ತದೆ. ಇಲ್ಲಿ ಮೈಕ್ರೋಬಿಯಲ್ ದ್ರಾವಣ ಬಳಸಿ Aerated Lagoon ಹಾಗೂ polishing pond ಮುಖಾಂತರ ತ್ಯಾಜ್ಯ ನೀರನ್ನು ಸಂಸ್ಕರಿಸಲಾಗುತ್ತಿದೆ.
- **ದಾವಣಗೆರೆ**– ದಾವಣಗೆರೆ ಮಹಾನಗರ ವ್ಯಾಪ್ತಿಯಲ್ಲಿ 04 ಮಲೀನ ನೀರು ಶುದ್ದೀಕರಣ ಘಟಕಗಳಿದ್ದು ದ್ರವ ತ್ಯಾಜ್ಯ ನೀರನ್ನು ಯು.ಜಿ.ಡಿ. ಪೈಪ್ ಲೈನ್ ಮುಖಾಂತರ 1) ಶಿವನಗರದ 20 ಎಮ್ ಎಲ್ ಡಿ ( ಫೇಸ್–1), 2) ಶಿವನಗರದ 20 ಎಮ್ ಎಲ್ ಡಿ ( ಫೇಸ್–2) 3) ಆವರೆಗೆರೆ 5 ಎಮ್ ಎಲ್ ಡಿ 4) ಬಾತಿಯಲ್ಲಿರುವ 14.8 ಎಮ್ ಎಲ್ ಡಿ ಮಲೀನ ನೀರು ಶುದ್ದೀಕರಣ ಘಟಕದಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ. ವಿಲೇವಾರಿ ಮಾಡಲಾಗುತ್ತಿದೆ. ಶಿವನಗರದ 20 ಎಮ್ ಎಲ್ ಡಿ ( ಫೇಸ್–1) ನ್ನು ಪಾಲಿಕೆಯಿಂದ ನಿರ್ವಹಿಸುತ್ತಿದ್ದು , ಶಿವನಗರದ 20 ಎಮ್ ಎಲ್ ಡಿ ( ಫೇಸ್–2) ಮತ್ತು ಆವರೆಗೆರೆ 5 ಎಮ್ ಎಲ್ ಡಿಯ ಎಸ್ ಟಿ ಪಿ ಯನ್ನು ಕೆಯುಐಡಿಎಫ್‌ಸಿ ರವರು ನಿರ್ವಹಣೆ ಮಾಡುತ್ತಿದ್ದಾರೆ .
- **ಹುಬ್ಬಳ್ಳಿ–ಧಾರವಾಡ** – ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 791.23 ಕಿ.ಮೀ. ಗಳಷ್ಟು ಒಳಚರಂಡಿ ಕೊಳವೆ ಮಾರ್ಗ, 6 ಸಂಖ್ಯೆ ತೇವಬಾವಿಗಳು ಮತ್ತು ಒಟ್ಟು 77.50 MLD ಸಾಮರ್ಥ್ಯದ 7 ಸಂಖ್ಯೆಯ ಒಳಚರಂಡಿ ನೀರು ಸಂಸ್ಕರಣ ಘಟಕಗಳ ಮೂಲಕ ದ್ರವತ್ಯಾಜ್ಯ ನೀರನ್ನು / ಒಳಚರಂಡಿ ನೀರನ್ನು ಸಂಸ್ಕರಿಸಿ ವಿಲೇವಾರಿ ಮಾಡಲಾಗುತ್ತದೆ.
- **ಮಂಗಳೂರು** – ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಕಾವೂರು ಮತ್ತು ಪಚ್ಚನಾಡಿ ದ್ರವ ತ್ಯಾಜ್ಯ ಘಟಕದಲ್ಲಿ ಸೆಕೆಂಡರಿ ಶುದ್ಧೀಕರಣಗೊಳಿಸಿ ಇದರಲ್ಲಿ 80% ನ್ನು ಟರ್ಸರಿ ಟ್ರೀಟ್‌ಮೆಂಟ್ ಪ್ಲಾಂಟ್ ಮುಖಾಂತರ ಶುದ್ಧೀಕರಣಗೊಳಿಸಿ ಮರು ಬಳಕೆ ಮಾಡಲಾಗುತ್ತಿದೆ ಹಾಗೂ 20% ಸೆಕೆಂಡರಿ ಶುದ್ಧೀಕರಣಗೊಳಿಸಿದ ನೀರನ್ನು ವಿಲೇ ಮಾಡಲಾಗುತ್ತಿದೆ. ಸುರತ್ಕಲ್ ಮತ್ತು ಬಜಾಲ್ ದ್ರವ ತ್ಯಾಜ್ಯ ಘಟಕದಲ್ಲಿ ಸೆಕೆಂಡರಿ ಶುದ್ಧೀಕರಣಗೊಳಿಸಿ ಶುದ್ಧೀಕರಿಸಿದ ನೀರನ್ನು ವಿಲೇ ಮಾಡಲಾಗುತ್ತಿರುತ್ತದೆ

- **ಬೆಳಗಾವಿ** -- ಬೆಳಗಾವಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ದ್ರವತ್ಯಾಜ್ಯ ವಿಲೇವಾರಿ ಮಾಡಲು 70 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಹಾಗೂ ಇನ್ನಿತರೆ ಕಾಮಗಾರಿಗಳನ್ನು ಕೇಂದ್ರ ಸರ್ಕಾರ ಅಮೃತ 1.0 ಯೋಜನೆಯಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿ ಹಂತದಲ್ಲಿದೆ.
- **ಶಿವಮೊಗ್ಗ** – ಶಿವಮೊಗ್ಗ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ದ್ರವತ್ಯಾಜ್ಯ ವಿಲೇವಾರಿಯನ್ನು ಈ ಕೆಳಕಂಡಂತೆ ಮಾಡಲಾಗುತ್ತದೆ

  1. ಶಿವಮೊಗ್ಗ ನಗರದ ಸಮಗ್ರ ಒಳಚರಂಡಿ ಯೋಜನೆಯಡಿ ತ್ಯಾವರೆಚಟ್ನಹಳ್ಳಿ ಹತ್ತಿರ 35.58 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕವನ್ನು ಪೂರ್ಣಗೊಳಿಸಿ ಏಪ್ರಿಲ್ –2017 ರಂದು ಚಾಲನೆಗೊಳಿಸಲಾಗಿದೆ.
  2. ಅಮೃತ್ ಯೋಜನೆಯಡಿ ಶಿವಮೊಗ್ಗ ನಗರಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯಡಿ ಪುರಲೆ ಗ್ರಾಮದ ಬಳಿ 5.13 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಿ ನವಂಬರ್–2020 ರಲ್ಲಿ ಚಾಲನೆಗೊಳಿಸಲಾಗಿದೆ.
  3. ಸದರಿ ಎರಡು ಮಲಿನ ನೀರು ಶುದ್ಧೀಕರಣ ಘಟಕಗಳನ್ನು ಶಿವಮೊಗ್ಗ ಮಹಾನಗರಪಾಲಿಕೆಗೆ ಮುಂದಿನ ನಿರ್ವಹಣೆಗೆ ಹಸ್ತಾಂತರಿಸಲಾಗಿದೆ.
  4. ಶಿವಮೊಗ್ಗ ನಗರದ ವಿವಿಧ ಬಡವಣೆಗಳಿಂದ ಬರುವ ಮಲಿನ ನೀರನ್ನು ಶುದ್ಧೀಕರಣ ಘಟಕಗಳಿಗೆ ಹರಿಸಿ, ಶುದ್ಧೀಕರಿಸಿದ ಮಲಿನ ನೀರನ್ನು ಪರೀಕ್ಷಿಸಿ, ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಆದೇಶದಂತೆ ಹಾಗೂ KSPCB ರವರ parameters permissible limits ಒಳಗೆ ಬಂದ ನಂತರ ನದಿಗೆ ಹರಿಸಲಾಗುವುದು. ಪ್ರಸ್ತುತ ಸದರಿ ಎರಡು ಮಲಿನ ನೀರು ಶುದ್ಧೀಕರಣ ಘಟಕವನ್ನು ಶಿವಮೊಗ್ಗ ಮಹಾನಗರಪಾಲಿಕೆ ವತಿಯಿಂದ ನಿರ್ವಹಣೆ ಮಾಡಲಾಗುತ್ತದೆ.

- **ವಿಜಯಪುರ** – ವಿಜಯಪುರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 31 ಎಂಎಲ್ ಡಿ ಸಾಮರ್ಥ್ಯದ ದ್ರವ ತ್ಯಾಜ್ಯ ನಿರ್ವಹಣಾ ಘಟಕ (STP) ಕಾರ್ಯನಿರ್ವಹಿಸುತ್ತಿದ್ದು ಸದರಿ ದ್ರವ ತ್ಯಾಜ್ಯ ನಿರ್ವಹಣ ಘಟಕವು (STP) Extended Aerated Lagoon ಮಾದರಿಯಾಗಿದ್ದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ನಗರದ ಜನ ಸಾಂದ್ರತೆ ಹಾಗೂ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಮತ್ತೆ ಕೆಲವು ದ್ರವ ತ್ಯಾಜ್ಯ ನಿರ್ವಹಣಾ ಘಟಕ (STP) ಗಳನ್ನು ನಿರ್ಮಿಸಲಾಗುವುದು.

13/2/23